# 15

# ಸಭೆಯ ಬೆಳವಣಿಗೆಯ ಆಹ್ವಾನ

ಸಭೆಯು ಬೆಳೆಯ ಬೇಕೆಂದು ದೇವರು ಬಯಸುತ್ತಾನೆ. ಈ ವಿಷಯದಲ್ಲಿ, ಸಭೆಗಾಗಿ ಹೆಚ್ಚಾದ ಸಭಾನಾಯಕರು ಬಯಸುವಂಥದ್ದನ್ನು ದೇವರು ಬಯಸುವಂಥದ್ದರೊಂದಿಗೆ ಸರಿ ಹೋಲುತ್ತದೆ.

ಹಿಂದಿನ ದಿನಗಳಲ್ಲಿ ಸಭೆಯು ಬೆಳವಣಿಗೆ ಹೊಂದಿದೆ. 1964ರಲ್ಲಿ, "ಅಮೇರಿಕನ್ ಸಭೆಗಳ ವಾರ್ಷಿಕ ಪುಸ್ತಕದ ಪ್ರಕಾರವಾಗಿ, ಕ್ರಿಸ್ತನ ಸಭೆಗಳು ತೀವ್ರವಾಗಿ ಬೆಳೆಯುತ್ತಿರುವ ಧಾರ್ಮಿಕ ಗುಂಪಾಗಿದೆ ಮತ್ತು ಇದು ಹಿಂದಿನ ಇಪ್ಪತ್ತು ವರ್ಷಗಳಿಂದ ಹೀಗಾಗುತ್ತಲಿದೆ" ಎಂದು ಬುಲೆಟಿನ್ ಲೇಖನಗಳು ಪ್ರಕಟಿಸಿದವು. ವಾರ್ಷಿಕ ಪುಸ್ತಕವು 1941ರಿಂದ 1961ರ ವರೆಗೆ ಇದ್ದ ಅವಧಿಯಲ್ಲಿ ಸಭೆಯು 580 ಪರ್ಸೆಂಟ್ ಬೆಳೆದಿದೆ ಎಂಬುದನ್ನು ಸೂಚಿಸಿತು![1]

ಹೀಗಿದ್ದರೂ, ಅಂಕಿ ಸಂಖ್ಯಾಶಾಸ್ತ್ರವು ಯು.ಎಸ್‌ದಲ್ಲಿಯ ಕರ್ತನ ಸಭೆಗಳ ಸತತ ವಾದ ಬೆಳವಣಿಗೆಯ ಅವಧಿಯು ಅಂತ್ಯಗೊಂಡಿತು ಮತ್ತು ಸಂಖ್ಯೆಯು ಕಡಿಮೆಯಾಗಲು ಪ್ರಾರಂಭಿಸಿತು ಎಂಬುದನ್ನು ಸೂಚಿಸುತ್ತದೆ. ಇತ್ತೀಚೆಗಿನ ವರ್ಷಗಳಲ್ಲಿ ಮಾತ್ರವೇ ಯು.ಎಸ್.ದಲ್ಲಿಯ ಕ್ರಿಸ್ತನ ಸಭೆಗಳು ಇಡೀಯಾಗಿ ಯೋಚಿಸಲ್ಪಡುತ್ತಿವೆ ಮತ್ತು ಪುನಃ ಬೆಳೆ ಯಲು ಪ್ರಾರಂಭಗೊಂಡಿವೆ ಎಂಬ ಸಮಾಚಾರವಿರುತ್ತದೆ.[2]

ಕರ್ತನ ಸಭೆಯಲ್ಲಿಯ ನಾಯಕರು ತಾವು ನಡಿಸುತ್ತಿರುವ ಸಭೆಗಳು ಬೆಳೆಯುತ್ತಿರುವದಿಲ್ಲ ಎಂಬ ಸಂಗತಿಯನ್ನು ಆಗಾಗ ಎದುರಿಸುತ್ತಾರೆ. ಅನೇಕ ಸಭೆಗಳು ವರ್ಷ ವರ್ಷವೂ ಒಂದೇ ಅಳತೆಯಲ್ಲಿರುತ್ತವೆ, ಮತ್ತು ಸಭೆಯು ಬೆಳೆಯ ಬೇಕೆಂದು ನಾಯಕರು ಅಪೇಕ್ಷಿಸಿದರೂ, ಕೆಲವು ಸಭೆಗಳು ಸಂಖ್ಯೆಯಲ್ಲಿ ಕಡಿಮೆಯಾಗುತ್ತ ಹೋಗುತ್ತವೆ. ಸಂಖ್ಯೆಯಲ್ಲಿ (ಸದಸ್ಯತ್ವದಲ್ಲಿ, ಹಾಜರಿರುವದರಲ್ಲಿ, ಮತ್ತು ಕೊಡುಗೆಗಳಲ್ಲಿ) ಸ್ಥಳಿಕ ಸಭೆಗಳು ಬೆಳೆಯುತ್ತಿದ್ದರೂ "ನಿಜವಾದ" ಬೆಳವಣಿಗೆಯನ್ನು ಅನುಭವಿಸದೇ ಇರಬಹುದು. ಯಾರನ್ನೂ ಬಾಪ್ತಿಸ್ಮ ಮಾಡಿಸದೇ ಕ್ರಿಸ್ತನ ಇತರ ಸಭೆಗಳಿಂದ, ಅವರು ಸದಸ್ಯರನ್ನು ಪಡೆದು ಕೊಳ್ಳುತ್ತಿರಬಹುದು - ಇದು ಸ್ಥಳಿಕ ಸಭೆಗೆ ಸಹಾಯ ಮಾಡಬಹುದು, ಆದರೆ ರಕ್ಷಿಸಲ್ಪಟ್ಟವರ ಸಂಖ್ಯೆಯನ್ನು ಹೆಚ್ಚಿಸುವದಿಲ್ಲ.

ಸಭೆಯ ಬೆಳವಣಿಗೆಯ ಆಹ್ವಾನವು ಹೇಗೆ ನಿಧಾನವಾಗಿ ಬೆಳೆಯುವ ಇಲ್ಲವೇ ಬೆಳವಣಿಗೆಯೇ ಇಲ್ಲದ ಸಮಸ್ಯೆಯನ್ನು ಪರಿಹರಿಸಬಹುದೆಂಬುದನ್ನು ಹುಡುಕಿ ಕಂಡು ಕೊಳ್ಳುವುದಾಗಿದೆ.

ಸಮಸ್ಯೆಗೆ ಪರಿಹಾರವನ್ನು ನಾವು ಸೂಚಿಸುವ ಮೊದಲು ದೇವರು ಸಭೆಯ ಬೆಳ ವಣಿಗೆಯನ್ನು ಆಜ್ಞಾಪಿಸುವದಿಲ್ಲ ಎಂಬುದನ್ನು ಗಮನಿಸುವ ಅಗತ್ಯತೆಯಿದೆ. ಆದರೆ ದೇವರು ನಂಬಿಗಸ್ತಿಕೆಯನ್ನು ಕೇಳುತ್ತಾನೆ. ತನ್ನ ವಾಕ್ಯವನ್ನು ನಾವು ನಂಬಿಗಸ್ತಿಕೆಯಿಂದ ಪ್ರಸಂಗಿಸ ಬೇಕು ಮತ್ತು ಬೋಧಿಸಬೇಕೆಂದು ಆತನು ಆಜ್ಞಾಪಿಸುತ್ತಾನೆ. ಸಂಖ್ಯೆಯಲ್ಲಿ ಬೆಳೆಯದೇ ಒಂದು ಸಭೆಯು ನಂಬಿಗಸ್ತಿಕೆಯಿಂದ ದೇವರ ವಾಕ್ಯವನ್ನು ಸಾರಬಹುದು ಮತ್ತು ಆತನನ್ನು ಮೆಚ್ಚಿಸಬಹುದು. ಹೀಗಿದ್ದರೂ ಆತನು ಸಭೆಯ ಬೆಳವಣಿಗೆಯನ್ನು (ಸಂಖ್ಯೆಯಲ್ಲಿ ಬೆಳೆ ಯುವದನ್ನೊಳಗೊಂಡು), ಅಪೇಕ್ಷಿಸುವದರಿಂದ ಬೆಳೆಯುವ ಮಾರ್ಗಗಳನ್ನು ಹುಡುಕುವುದು ನಮಗೆ ಸರಿಯಾದದ್ದಾಗಿದೆ. ಇಲ್ಲಿ ಕೆಲವು ಸಲಹೆಗಳಿರುತ್ತವೆ, ಅವುಗಳಂತೆ ನಡೆದರೆ, ಅವು ಸಭೆಯ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಸಭೆಯ ಬೆಳವಣಿಗೆಗೆ ಈ ಏಳು ಹೆಜ್ಜೆಗಳನ್ನು ಪರೀಕ್ಷಿಸೋಣ.[3]

## ಹೆಜ್ಜೆ 1: ಸಭೆಯು ಬೆಳೆಯಬೇಕೆಂದು ದೇವರು ಬಯಸುತ್ತಾನೆಂಬುದನ್ನು ಅರ್ಥಮಾಡಿಕೋ

ಮೊದಲನೆಯದಾಗಿ, ಮಾನವ ಕುಲಕ್ಕಾಗಿ ದೇವರ ಚಿತ್ತವು ತಪ್ಪಿ ಹೋದದ್ದು ರಕ್ಷಿಸಲ್ಪಡುವುದು ಆಗಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು (ಲೂಕ 19:10; 2 ಪೇತ್ರ 3:9). ಪ್ರತಿಯೊಂದು ದೇಶದ ತಪ್ಪಿ ಹೋದವರಿಗಾಗಿ ತನ್ನ ಚಿಂತನೆಯನ್ನು ವ್ಯಕ್ತಪಡಿಸುವದರಿಂದ ಸಭೆಯ ಬೆಳವಣಿಗೆಯಲ್ಲಿ ದೇವರು ತನ್ನ ಆಸಕ್ತಿಯನ್ನು ಪ್ರದರ್ಶಿಸಿದ್ದಾನೆ, "ಭೂ ಲೋಕದ ಎಲ್ಲಾ ಕುಲದವರಿಗೂ ಆಶೀರ್ವದಿಸಲ್ಪಡಲಿಕ್ಕಾಗುವಂತೆ" ಆತನು ಅಬ್ರಹಾಮನನ್ನು ಕರೆದನು (ಆದಿಕಾಂಡ 12:3). ಜಗತ್ತಿನಲೆಲ್ಲಾ ಆತನ ಸಂದೇಶವು ಹಾಗೂ ರಾಜ್ಯವು ಪ್ರಸಾರಗೊಳ್ಳಬೇಕೆಂದು ತನ್ನ ಅಪೇಕ್ಷೆಯನ್ನು ಆತನ್ನು ಸೂಚಿಸಿದನು (ಯೆಶಾಯ 11:9; ಹಬಕ್ಕೂಕ 2:14; ದಾನಿಯೆಲು 2:35). ರಾಜ್ಯವು ಬೆಳೆಯುವದೆಂದು ಯೇಸುವು ಬೋಧಿಸಿದನು, ಅದನ್ನು ಸಾಸಿವೆಕಾಳಿಗೆ ಮತ್ತು ಹುಳಿ ಹಿಟ್ಟಿಗೆ ಹೋಲಿಸಿದನು (ಮತ್ತಾಯ 13:31-33). "ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕು" ಎಂದು ಆತನು ಅಪ್ಪಣೆ ಕೊಟ್ಟನು (ಮತ್ತಾಯ 28:19; ಹೋಲಿಸು. ಮಾರ್ಕ 16:15; ಲೂಕ 24:47). "ಲೋಕದ ಕಟ್ಟ ಕಡೆಯವರೆಗೆ" ಅಪೊಸ್ತಲರು ಸಾಕ್ಷಿಗಳಾಗಿದ್ದರು (ಅಪೊಸ್ತಲರ ಕೃತ್ಯಗಳು 1:8). ಅಂತಿಮವಾಗಿ, ಪರಲೋಕದಲ್ಲಿ "ಸಕಲ ಕುಲಜನಾಂಗ ಪ್ರಜೆಗಳವರೂ ಸಕಲ ಭಾಷೆಗಳನ್ನಾಡುವವರೂ ... ಯಜ್ಞದ ಕುರಿಯಾದಾತನ ಸಿಂಹಾಸನದ ಮುಂದೆ ಬಿಳಿ ನಿಲುವಂಗಿಗಳನ್ನು ತೊಟ್ಟು ಕೊಂಡು ನಿಂತಿರುವರು ..." (ಪ್ರಕಟನೆ 7:9).

ಸಭೆಯ ಬೆಳವಣಿಗೆಯಲ್ಲಿ ದೇವರ ಆಸಕ್ತಿಯು ಅಪೊಸ್ತಲರ ಕೃತ್ಯಗಳಲ್ಲಿ ಇನ್ನೂ ಹೆಚ್ಚಾಗಿ ಕಂಡು ಬರುತ್ತದೆ, ಅಲ್ಲಿ ಪುಸ್ತಕದಲ್ಲಿ ಅನೇಕ ಸ್ಥಳಗಳಲ್ಲಿ ಪ್ರೇರೇಪಿತ ಲೂಕನು "ಪ್ರಗತಿಯ ವರಗಳನ್ನು" ಕೂಡಿಸಿದ್ದಾನೆ. ಪಂಚಾಶತ್ತಮ ಹಬ್ಬದ ದಿನದಂದು ಸುಮಾರು ಮೂರು ಸಾವಿರ ಜನರು ಕ್ರೈಸ್ತರಾದರು (2:41). ದಿನದಿನದ ಕೂಡಿಸುವಿಕೆಯ ನಂತರ (2:47), ಸಭೆಯಲ್ಲಿ ಬೇಗನೇ 5000 ಪುರುಷರಿದ್ದರು (4:4). ಅದರ ನಂತರ, ಪುರುಷರ ಮತ್ತು ಸ್ತ್ರೀಯರ ಸಮೂಹಗಳು ದೇಹಕ್ಕೆ ಕೂಡಿಸಲ್ಪಟ್ಟವು (5:14), ಮತ್ತು ಶಿಷ್ಯರ ಸಂಖ್ಯೆಯು ಬೆಳೆಯುತ್ತಲೇ ಮುಂದುವರಿಯಿತು (6:1, 7; 9:31; 16:5). ಬೇರೆ ಬೇರೆ ಸ್ಥಳಗಳಲ್ಲಿ ಕ್ರೈಸ್ತರಾದವರು "ಅನೇಕರು" (9:42), "ದೊಡ್ಡ ಸಂಖ್ಯೆಯಲ್ಲಿದ್ದವರು" (11:21), "ಬಹುಮಂದಿ" (11:24), "ಬಹುಮಂದಿ" (14:1), "ಅನೇಕರು" (14:21), "ಕೆಲವರು ... ದೊಡ್ಡ ಗುಂಪು ... ಅನೇಕರು ..." (17:4), "ಅನೇಕರು" (17:12), ಮತ್ತು "ಅನೇಕರು" (18:8) ಇದ್ದರು. ಪರಿಣಾಮವು ದೇವರ ವಾಕ್ಯವು ಮುಂದುವರಿಯಿತು ಮತ್ತು "ಹೆಚ್ಚುತ್ತಾ ಬಂತು" (12:24), "ಎಲ್ಲಾ ಕಡೆಗಳಲ್ಲಿ ಹಬ್ಬುತ್ತಾ ಬಂದಿತು" (13:49), ಮತ್ತು "ಬಹಳವಾಗಿ ಹೆಚ್ಚುತ್ತಾ ಪ್ರಭಲವಾಯಿತು" (19:20).

ತಪ್ಪಿ ಹೋದವರಿಗಾಗಿ ದೇವರ ಚಿಂತನೆಯು "ದೇವರು ನಮ್ಮೊಂದಿಗಿದ್ದಾನೆ" ಆಗಿರುವ ಕ್ರಿಸ್ತನಲ್ಲಿ ವ್ಯಕ್ತವಾಗಿದೆ. ಸಭೆಯ ಬೆಳವಣಿಗೆಯಲ್ಲಿ ಯೇಸುವಿನ ಆಸಕ್ತಿಯು ಈ ರೀತಿಯಲ್ಲಿ ಉದಾಹರಿಸಲ್ಪಟ್ಟಿದೆ:

*ಇದರೊಂದಿಗೆ ಕ್ರಿಸ್ತನು ಸಂತುಷ್ಟನಾಗಿರುವದಿಲ್ಲ ...*

- ಹಿಡಿಯದೇ ಮೀನು ಬೇಟೆ ಮಾಡುವುದು
- ಬರಿದಾದ ಔತಣದ ಮೇಜುಗಳು
- ಸುಗ್ಗಿ ಮಾಡದೇ ಬಿತ್ತುವುದು
- ಫಲ ಬಿಡದ ಅಂಜೂರದ ಮರ
- ಮಂದೆಯೊಳಗೆ ತರದೇ ಇದ್ದ ಕಳೆದು ಹೋದ ಕುರಿಗಳು
- ಹುಡುಕಲ್ಪಟ್ಟ ಆದರೆ ಸಿಕ್ಕದೇ ಹೋದ ಕಳೆದು ಹೋದ ನಾಣ್ಯ
- ರಾಶಿ ಮಾಡದ ಸುಗ್ಗಿಗಳು

- ಪ್ರತ್ಯುತ್ತರವಿಲ್ಲದ ಘೋಷಣೆ
- ತಂದೆಯ ಮನೆಯ ಹೊರಗಿರುವ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು[4]

ಸಂಖ್ಯೆಯ ಬೆಳವಣಿಗೆಯಲ್ಲಿ ಮಾತ್ರವೇ ದೇವರು ಆಸಕ್ತಿಯುಳ್ಳವನಾಗಿರುವದಿಲ್ಲ ವೇನೋ ಸರಿ; ಸಭೆಯು ಆತ್ಮಿಕವಾಗಿಯು ಬೆಳೆಯಬೇಕೆಂದು ಆತನು ಬಯಸುತ್ತಾನೆ (ಎಫೆಸ 4:11-16). ಸಂಖ್ಯೆಗಳ ನಿಮಿತ್ತವಾಗಿ ಸತ್ಯವನ್ನು ಬಲಿಕೊಡಬಾರದೆಂದು ಆತನು ನಮ್ಮ ವಿಷಯದಲ್ಲಿ ಬಯಸುತ್ತಾನೆ (ಯೋಹಾನ 17:17). ಹೀಗಿದ್ದರೂ, ತಪ್ಪಿ ಹೋದವರಿಗಾಗಿ ದೇವರ ಪ್ರೀತಿ ಯನ್ನು ನಾವು ಹಂಚಿಕೊಳ್ಳಬೇಕಾದರೆ, ಸಂಖ್ಯಾನುಸಾರ ಸಭೆಯ ಬೆಳವಣಿಗೆಯಲ್ಲಿ ಸಾಧ್ಯವಾ ದಷ್ಟು ತಪ್ಪಿ ಹೋದವರನ್ನು ರಕ್ಷಿಸುವದಕ್ಕಾಗಿ ಹುಡುಕುವಲ್ಲಿ ನಾವು ಆಸಕ್ತರಾಗಿರಬೇಕು.

## ಹೆಜ್ಜೆ 2: ಪ್ರಾರ್ಥಿಸು

ಸಭೆಯು ಬೆಳೆಯ ಬೇಕಾದರೆ, ಆಗ ಸಭೆಯು ಪ್ರಾರ್ಥಿಸತಕ್ಕದ್ದು ಯಾಕೆ? *ಮೊದಲನೆಯದಾಗಿ ಸಭೆಯ ಬೆಳವಣಿಗೆಯು ಒಟ್ಟಾಗಿ ನಮ್ಮ ಮೇಲೆ ಅವಲಂಭಿಸಿರುವದಿಲ್ಲ.* ಅದು ಕೇಳುವವರ ಕೇಳುವಿಕೆಯ ಮೇಲೆ ಅವಲಂಭಿಸಿರುತ್ತದೆ. ಬಿತ್ತುವವನ ಸಾಮ್ಯವು (ಮತ್ತಾಯ 13:1-23) ಒಬ್ಬನೇ ಬಿತ್ತುವವನು ಅದೇ ಬೀಜ ವನ್ನು ಅದೇ ವಿಧಾನಗಳನ್ನು ಉಪಯೋಗಿಸಿ ಬಿತ್ತುವನು ಮತ್ತು ಪರಿಣಾಮಗಳು ಕೇಳುವವರ ಸ್ವೀಕರಿಸುವಿಕೆಗನುಗುಣ ವಾಗಿ, ಭಿನ್ನವಾಗಿರುವವು ಎಂಬುದನ್ನು ಬೋಧಿಸುತ್ತದೆ. ಅದು ದೇವರ ಮೇಲೆಯೂ ಅವಲಂಭಿಸಿರುತ್ತದೆ, ಯಾಕಂದರೆ ಆತನು ಬೆಳವಣಿಗೆಯನ್ನು ಕೊಡುತ್ತಾನೆ (1 ಕೊರಿಂಥ 3:6). ಸ್ವೀಕರಿಸಿಕೊಳ್ಳುವ ಹೃದಯಗಳಿಗಾಗಿ ಮತ್ತು ದೇವರು ನಮಗೆ ಸುಗ್ಗಿಯನ್ನು ಕೊಡುವದಕ್ಕಾಗಿ ನಾವು ಪ್ರಾರ್ಥಿಸಬೇಕು. *ಎರಡನೆಯದು, ಪ್ರಾರ್ಥನೆಯು ಪರಿಣಾಮಕಾರಿಯಾದದ್ದಾಗಿದೆ.* ನಾವು ಬೇಡಿಕೊಂಡರೆ, ಹುಡುಕಿದರೆ ಮತ್ತು ತಟ್ಟಿದರೆ, ನಾವು ನೋಡುತ್ತಿರುವುದನ್ನು ಸ್ವೀಕರಿಸಿಕೊಳ್ಳುವೆವು ಎಂದು ಬೈಬಲ್ ಬೋಧಿಸುತ್ತದೆ (ಮತ್ತಾಯ 7:7, 8), ಮತ್ತು ನಾವು ದೇವರ ಚಿತ್ತಕ್ಕೆ ಅನುಗುಣವಾಗಿ ಬೇಡಿಕೊಂಡರೆ ಆತನು ನಮ್ಮನ್ನು ಕೇಳುತ್ತಾನೆ ಹಾಗೂ ನಾವು ಕೇಳಿಕೊಂಡದ್ದನ್ನು ನಾವು ಸ್ವೀಕರಿಸಿಕೊಳ್ಳುತ್ತೇವೆ (1 ಯೋಹಾನ 5:14, 15). *ಮೂರನೆಯದು, "ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ" ಎಂದು ಯೇಸುವು ನಮಗೆ ಹೇಳಿದನು* (ಮತ್ತಾಯ 9:38). ಸಭೆಯು ಬೆಳೆಯಬೇಕೆಂದು ಸಭೆಯ ನಾಯಕರು ನಿಜವಾಗಿಯೂ ಬಯಸಿದರೆ, ಪ್ರಾರ್ಥಿಸುವದಕ್ಕಾಗಿ ಸಭೆಯನ್ನು ಪ್ರೋತ್ಸಾಹಿಸುವದರಿಂದ ಪ್ರಾರಂಭಿಸುವುದು ಅವರಿಗೆ ಅತ್ಯುತ್ತಮವಾದ ಮಾರ್ಗವಾಗಿದೆ.

## ಹೆಜ್ಜೆ 3: ಸಭೆಯು ಬೆಳೆಯುವದಕ್ಕೆ ಸಹಾಯ ಮಾಡಲು ನಿರ್ಧರಿಸುವುದು

ಸಭೆಯು ಬೆಳೆಯುವದಕ್ಕಾಗಿ, ವ್ಯಕ್ತಿಗಳು ಅದು ಬೆಳೆಯುವದಕ್ಕೆ ಸಹಾಯ ಮಾಡಲು ನಿರ್ಧರಿಸಿಕೊಳ್ಳತಕ್ಕದ್ದು. ಸಭೆಯ ಬೆಳವಣಿಗೆಯ ಅಧ್ಯಯನಗಳು ಯಾವುದೇ ಸ್ಥಳದಲ್ಲಿ, ಸಭೆಯು ಬೆಳವಣಿಗೆಯಾಗಲು ಪ್ರಾರಂಭಿಸಿದಾಗ, ಅದು ಒಬ್ಬ ವ್ಯಕ್ತಿಯ (ಸಾಮನ್ಯವಾಗಿ ಒಬ್ಬ ಮಿಶನರಿಯ, ಪ್ರಸಂಗಿಯ, ಇಲ್ಲವೇ ಸಭೆಯ ನಾಯಕನ) ತೀರ್ಮಾನದ ಕಾರಣದಿಂದ ಆಗಿರುತ್ತದೆ. ವೈಯಕ್ತಿಕ ವ್ಯಕ್ತಿಗಳು ಸಭೆಯನ್ನು ಬೆಳೆಯುವಂತೆ ಮಾಡಲು ನಿರ್ಧರಿಸಿ ಕೊಂಡವರು, ದೇವರ ಸಹಾಯದಿಂದ, ಯಾವುದೇ ಸ್ಥಳಿಕ ಸಭೆಯಲ್ಲಿ ಬೆಳವಣಿಗೆಗೆ ಬೀಗದ ಕೈಯಾಗಿದ್ದಾರೆ.

ಒಬ್ಬ ಸದಸ್ಯನು ಸಭೆಯು ಬೆಳೆಯುವದಕ್ಕೆ ಸಹಾಯ ಮಾಡಲು ಪ್ರಾರಂಭಿಸುವ

ಮೊದಲು ಮಾಡಲಿಕ್ಕೆ ಒಂದು ಕರ್ತವ್ಯವು ಕೊಡಲ್ಪಡುವವರೆಗೆ ಕಾದುಕೊಂಡಿರ ಬೇಕಾದ ಅಗತ್ಯತೆಯಿಲ್ಲ. ಅವನು ಕೂಡಲೇ ಪ್ರಾರಂಭಿಸಬೇಕು. ತೆಗೆದುಕೊಡಲ್ಪಡುವ ಎಲ್ಲವೂ ಕ್ರಿಸ್ತನ ಸಹಾಯದಿಂದ ಅವನು ಮಾಡಬೇಕೆಂದು ತೀರ್ಮಾನಿಸುವಂಥದ್ದಾಗಿದೆ; ನಂಬಿಗಸ್ತನಾಗಿರುವುದು; ಆತ್ಮಿಕವಾಗಿ ಬೆಳೆಯುವುದು; ಬಲಹೀನರನ್ನು ಪ್ರೋತ್ಸಾಹಿಸುವುದು; ತಪ್ಪಿ ಹೋಗುವವರನ್ನು ಹಿಂದಿರುಗಿ ತರುವುದು; ಮತ್ತು ಕಳೆದು ಹೋದವರನ್ನು ಗೆದ್ದು ಕೊಳ್ಳುವುದು ಆಗಿದೆ. ಈ ಒಳ್ಳೇ ಕಾರ್ಯಗಳನ್ನು ಮಾಡುವದರಿಂದ ಯಾರೂ ಕ್ರೈಸ್ತರನ್ನು ಅಡ್ಡಿಪಡಿಸಲಾರರು. ಅವುಗಳನ್ನು ಕ್ರೈಸ್ತರು ಮಾಡಿದರೆ, ಇತರರು ಏನನ್ನೇ ಮಾಡಿದರೂ ಮಾಡದಿದ್ದರೂ ಸಭೆಯು ಬಹುಶಃ ಬೆಳೆಯುತ್ತದೆ.

## ಹೆಜ್ಜೆ 4: ಸಭೆಯ ಬೆಳವಣಿಗೆಗಾಗಿ ಗುರಿಗಳನ್ನು ನೇಮಿಸುವುದು

ಗುರಿಗಳನ್ನು ನೇಮಿಸುವುದು[5] ನಾಲ್ಕನೆಯ ಹೆಜ್ಜೆಯಿಂದ ಏಳನೆಯ ಹೆಜ್ಜೆಯವ ರೆಗೆ ಮುಂದುವರಿಯುವ ವಿಧವಾಗಿರುತ್ತದೆ. ಅದರೊಂದಿಗೆ ನಾವು ಇಲ್ಲಿ ವ್ಯವಹರಿಸುತ್ತೇವೆ, ಯಾಕೆಂದರೆ, ಸಭೆಯ ಬೆಳವಣಿಗೆಗಾಗಿ ಯೋಚಿಸುವ ವಿಧಾನದ ಪ್ರಾರಂಭದಲ್ಲಿ ದೀರ್ಘಾ ವಧಿ ಗುರಿಗಳ ಕಡೆಗೆ ಯೋಜಿಸಲು ಪ್ರಾರಂಭಿಸತಕ್ಕದ್ದು. ಸಭೆಯ ಯೋಜಿಸುವಿಕೆಯಲ್ಲಿ ಹಾಗೂ ಗುರಿಗಳನ್ನು ನೇಮಿಸುವ ಕೂಟಗಳಲ್ಲಿ ಎಲ್ಲಾ ಸದಸ್ಯರಿಗೆ ಒಳಗೊಂಡಿರುವ ಅವಕಾಶವಿರತಕ್ಕದ್ದು. ಸದಸ್ಯರಿಂದ ಸೂಚಿಸಲ್ಪಟ್ಟ ಗುರಿಗಳನ್ನು, ಅವು ಅಂತಿಮ ಗುರಿಗಳು, ದೀರ್ಘಾವಧಿಯ ಗುರಿಗಳು, ಅಲ್ಪಾವಧಿ ಗುರಿಗಳು ಮತ್ತು ಅನುಕೂಲ ಮಾಡುವ ಗುರಿಗಳು ಆಗುವವರೆಗೆ ಸಭೆಯ ನಾಯಕರು ಚೊಕ್ಕಗೊಳಿಸ ಬೇಕು. ಈ ಗುರಿಗಳೊಳಗಿಂದ ಬೆಳ ವಣಿಗೆಗಾಗಿ ಸಭೆಯ ವಿಧಾನವು ಹೊರಟು ಬರುವುದು. ಆಗ ಸಭೆಯ ಕೆಲಸದ ಭಾಗವಾ ಗುವ ಕಾರ್ಯಕ್ರಮಗಳು ಗುರಿಗಳ ಆಧಾರದ ಮೇಲೆ ಮೌಲ್ಯೀಕರಿಸಲ್ಪಡ ಬಹುದು. ಸಭೆಯ ಉದ್ದೇಶಗಳ ಸಾಧನೆಗೆ ಅವು ಕೊಡುಗೆಯನ್ನಿತ್ತರೆ, ಅವು ಉಳಿಸಿಕೊಳ್ಳಲ್ಪಡಬೇಕು ಮತ್ತು ಸುಧಾರಿಸಲ್ಪಡಬೇಕು. ಇಲ್ಲದಿದ್ದರೆ, ಅವುಗಳನ್ನು ತೆಗೆದು ಹಾಕಲ್ಪಡಬಹುದು.

## ಹೆಜ್ಜೆ 5: ಹಿಂದಿನ ಬೆಳವಣಿಗೆಯನ್ನು ಮತ್ತು ಇಂದಿನ ಸ್ಥಿತಿಯನ್ನು ಪೃಥಕ್ಕರಿಸಬೇಕು

ಸಭೆಯ ಬೆಳವಣಿಗೆಗಾಗಿ ಒಂದು ನಿರ್ದಿಷ್ಟವಾದ ಯೋಜನೆಯನ್ನು ರೂಪಿಸಲು ಸಭೆಯ ನಾಯಕರು ಪ್ರಾರಂಭಿಸುವ ಮೊದಲು, ಸಭೆಯು ಹೇಗೆ ಮಾಡಿತು ಮತ್ತು ಹೇಗೆ ಮಾಡುತ್ತಲಿದೆ ಎಂಬುದನ್ನು ನಿರ್ಧರಿಸತಕ್ಕದ್ದು. ತಾವೆಲ್ಲಿದ್ದೇವೆ ಹಾಗೂ ಅವರು ಎಲ್ಲಿದ್ದೇವೆ ಮತ್ತು ಈಗ ಅವರಿಗೆ ಯಾವ ಮೂಲಗಳು ಲಭ್ಯವಿದೆ ಎಂದು ತಿಳಿಯದಿದ್ದರೆ, ಅವರು ಎಲ್ಲಿಗೆ ಹೋಗಬೇ ಕೆಂದು ಬಯಸುವರೋ ಅಲ್ಲಿಗೆ ಹೋಗಲಿಕ್ಕಾಗಲಿಲ್ಲ.

### ಹಿಂದಿನ ಬೆಳವಣಿಗೆಯನ್ನು ಪೃಥಕ್ಕರಿಸು

ಹಿಂದಿನ ಬೆಳವಣಿಗೆಯನ್ನು ಪೃಥಕ್ಕರಿಸಲು, ಒಬ್ಬರು ಬೆಳವಣಿಗೆಯ ಚಾರ್ಟನ್ನು, ವರ್ಷಗಳ ಹಿಂದಿನಿಂದ ಇಲ್ಲಿಯವರೆಗೆ ಆದ ಬೆಳವಣಿಗೆಯನ್ನು ತೋರಿಸುವದನ್ನು ಸಿದ್ಧಪಡಿಸ ಬೇಕು. ಉದಾಹರಣೆಯಾಗಿ ಹಿಂದಿನ ಹದಿನೈದು ವರ್ಷಗಳಿಂದ ಭಾನುವಾರ ಪ್ರಾತಃಕ್ಕಾಲ ಹಾಜರಿದ್ದವರ ಸಂಖ್ಯೆಯನ್ನು ನಮೂದಿಸಬೇಕು.[6] ಗ್ರಾಫಿನ ಗೆರೆಯು ಮೇಲಕ್ಕೆ ಕೆಳಕ್ಕೆ ಹೋಗು ವದನ್ನು, ಇಲ್ಲವೇ ಹಲವಾರು ಮೇಲೆ ಹೋಗುವುದೂ ಕೆಳಗಿಳಿಯುವದೂ ಇರುವುದೋ ಎಂಬುದನ್ನು ನಾಯಕರು ಗಮನಿಸತಕ್ಕದ್ದು. ಅನಂತರ, ಅವರು ಆ ಅವಧಿಯಲ್ಲಿ ಎಷ್ಟು ಜನರು ಸಭೆಯೊಳಗೆ ಬಂದರು ಮತ್ತು ಅವರು ಹೇಗೆ ಬಂದರು ಎಂಬುದನ್ನು ನಿರ್ಣಯಿಸತಕ್ಕದ್ದು. ಅವರು ಬಾಪ್ತಿಸ್ಮದಿಂದ ಬಂದರೋ (ಸಭೆಯ ಕುಟುಂಬಗಳಿಂದ ಇಲ್ಲವೇ "ಲೋಕ" ದೊಳಗಿಂದ), ನವೀಕರಣದಿಂದ, ಇಲ್ಲವೇ ಸದಸ್ಯತ್ವ ಪಡೆದು ಕೊಳ್ಳುವದರಿಂದ ಬಂದರೋ?

ಎಷ್ಟು ಜನರು ಸಭೆಯಿಂದ ಹೊರಗೆ ಹೋದರು ಮತ್ತು ಹೇಗೆ ಹೋದರು (ಮರಣದಿಂದ, ಬಿದ್ದು ಹೋಗುವದರಿಂದ, ಇಲ್ಲವೇ ಬೇರೆ ಕಡೆಗೆ ಹೋಗುವದರಿಂದ) ಅಂತಿಮವಾಗಿ, ಅವರು "ಯಾಕೆ?" ಗ್ರಾಫಿನಲ್ಲಿ ಮೇಲೆ ಕೆಳಗೆ ಯಾಕೆ? ಎಂದು ಪ್ರಶ್ನಿಸಬಹುದು. ಹೊಸ ಸದಸ್ಯರನ್ನು ಪಡೆಯುವಲ್ಲಿ ಯಾಕೆ ಯಶಸ್ಸು ಪಡೆಯಿತು ಇಲ್ಲವೇ ಸೋತು ಹೋಯಿತು? ಸಭೆಯು ಯಾಕೆ ಸದಸ್ಯರನ್ನು ಕಳೆದು ಕೊಂಡಿತು? ಕಾರಣಗಳು ಸೇವಕರಿಂದ (ಸಭೆಯ ನಾಯಕರು, ಪ್ರಸಂಗಿಗಳು ಇಲ್ಲವೇ ಸದಸ್ಯರುಗಳಿಂದ), ಕಾರ್ಯಕ್ರಮಗಳಿಂದ ಇಲ್ಲವೇ ಸಮಾಜದಲ್ಲಿಯ ಜನ ಸಂಖ್ಯೆಯಿಂದ (ಮತ್ತು ಅದರ ಸ್ವಭಾವದಿಂದ ಅದು ಬದಲಾಗಿದ್ದರೆ) ಆಗಿರುತ್ತದೆ.

ಹಿಂದಿನ ಬೆಳವಣಿಗೆಯನ್ನು ಪೃಥಕ್ಕರಿಸುವದರಿಂದ ಯಾವುದು ಒಳ್ಳೆಯದಾಗುತ್ತದೆ. ಅದು ಸಭೆಗೆ ಕೆಲವೊಂದು ಪ್ರೋತ್ಸಾಹವನ್ನು ಕೊಡಬಹುದು. ಸಭೆಯು ಜನರಿಗೆ ಬಾಪ್ತಿಸ್ಮ ಕೊಡುವದರಲ್ಲಿ, ರಕ್ಷಿಸಲ್ಪಟ್ಟವರನ್ನು ಕಾಪಾಡುವದರಲ್ಲಿ ತಾವು ವಿಚಾರಿಸಿದ್ದಕ್ಕಿಂತ ಹೆಚ್ಚು ಚೆನ್ನಾಗಿ ಮುಂದಿರುವದನ್ನು ನಾಯಕರು ಕಂಡು ಕೊಳ್ಳಬಹುದು; ತಮ್ಮ ಬೆಳವಣಿಗೆಯ ಕೊರತೆಯು ಕೆಲವು ಸದಸ್ಯರ ಮರಣದಿಂದ ಮತ್ತು ಅನೇಕ ಇತರರು ಬೇರೆ ಕಡೆಗೆ ಹೋಗಿದ್ದರ ಕಾರಣದಿಂದ ಆಗಿರುವದೆಂದು ತಿಳಿದು ಕೊಳ್ಳುವರು - ಇವೆರಡಕ್ಕೂ ಅವರು ಕಾರಣರಾಗುವದಿಲ್ಲ. ಸಭೆಯನ್ನು ದೂರ ಬೇಕಾಗಿರುವದಿಲ್ಲ. ಭವಿಷ್ಯದಲ್ಲಿ ಯಾವ ಕಾರ್ಯಕ್ರಮಗಳನ್ನು ಪುನಃ ಕೈ ಕೊಳ್ಳಬೇಕು ಮತ್ತು ಯಾವವುಗಳನ್ನು ಬಿಟ್ಟು ಬಿಡಬಹುದು ಎಂಬುದನ್ನು ತೋರಿಸುವುದು. ಸಭೆಯಲ್ಲಿ, ಬೇರೆ ಕಡೆ ಇದ್ದಂತೆ, ಹಿಂದಿನದರಿಂದ ನಾವು ಕಲಿತು ಕೊಳ್ಳದಿದ್ದರೆ, ಅದನ್ನು ಪುನಃ ಮಾಡುವ ಗಂಡಾಂತರದಲ್ಲಿರುವೆವು.

**ಇಂದಿನ ಸ್ಥಿತಿಯನ್ನು ಪೃಥಕ್ಕರಿಸಿರಿ**

ಸಭೆಯ ಇಂದಿನ ಸ್ಥಿತಿಯ ಬಗ್ಗೆ ಎರಡು ವಿಷಯಗಳು ಯೋಚಿಸಲ್ಪಡಬೇಕಾದ ಅಗತ್ಯತೆ ಇರುತ್ತದೆ: ನಮ್ಮ ನಿಜವಾದ ಪರಿಸ್ಥಿತಿಯನ್ನು ಮತ್ತು ನಮ್ಮ ಸಾಧ್ಯತೆಗಳನ್ನು ನಾವು ಮೌಲ್ಯಮಾಪನ ಮಾಡಬೇಕು.

*ಒಂದು ಸಭೆಯ ನಿಜವಾದ ಪರಿಸ್ಥಿತಿಯನ್ನು ಪೃಥಕ್ಕರಿಸುವಲ್ಲಿ, "ನಾವು ಹೇಗೆ ಮಾಡುತ್ತಿರುವೆವು?" ಎಂದು ಸಭಾ ನಾಯಕರು ಕೇಳುವ ಅಗತ್ಯತೆಯಿದೆ.* ಈ ಪರೀಕ್ಷಾ ಯಾದಿಯು ಬೆಳವಣಿಗೆಯ ಮೂರು ಕ್ಷೇತ್ರಗಳ ಮೌಲ್ಯಮಾಪನ ಮಾಡಲು ಅವರಿಗೆ ಸಹಾಯ ಮಾಡುತ್ತದೆ:

*ಸಂಖ್ಯೆಯಲ್ಲಿ ಬೆಳವಣಿಗೆಯನ್ನು ಪೃಥಕ್ಕರಿಸಿರಿ:* (1) ಇಂದಿನ ಸದಸ್ಯತ್ವದ ಮತ್ತು ಹಾಜರಿರುವವರ ಸಂಖ್ಯೆ ಎಷ್ಟು? (2) ಇತ್ತೀಚೆಗಿನ ಉತ್ತರಗಳು (ಪ್ರತಿಕ್ರಿಯೆಗಳು) ಎಷ್ಟು? (3) ಹಿಂದಿನ ವರ್ಷದಲ್ಲಿ ಸದಸ್ಯದ ಸಂಖ್ಯೆ, ಹಾಜರಿ ಮತ್ತು ಪ್ರತಿಕ್ರಿಯೆಗಳು ಎಷ್ಟಿದ್ದವು? (4) ಕಳೆದ ವರ್ಷ ಎಷ್ಟು ಜನರು ಮತ್ತು ಹೇಗೆ ಸಭೆಯಿಂದ ಹೊರಗೆ ಹೋದರು?

*ಆತ್ಮಿಕ ಬೆಳವಣಿಗೆಯನ್ನು ಪೃಥಕ್ಕರಿಸಿರಿ:* (1) ಇಡೀಯಾಗಿ ಹಾಜರಿದ್ದವರ, ಕೊಡುಗೆಯ, ಒಳಗೊಳ್ಳುವಿಕೆಯ ಮತ್ತು ಸಭೆಯ ಕಡೆಗೆ ಕ್ರಿಸ್ತನಂತಿರುವ ಮನೋಭಾವನೆಗಳ ಮಟ್ಟ ಯಾವುದಿತ್ತು? (2) ಪ್ರತಿಯೊಬ್ಬ ವೈಯಕ್ತಿಕ ಸದಸ್ಯನಿಗೆ ಹೇಗಿತ್ತು?

*ಸಾಂಘಿಕ ಬೆಳವಣಿಗೆಯನ್ನು ಪೃಥಕ್ಕರಿಸಿರಿ:* ಪ್ರತಿಯೊಬ್ಬ ಸದಸ್ಯನಿಗೆ ದೇವರು ಅವನಿಗೆ/ಆಕೆಗೆ ಕೊಟ್ಟ ವರಗಳನ್ನು ಉಪಯೋಗಿಸಿ ಅಮೂಲ್ಯವಾದ ಸಭೆಯ ಸದಸ್ಯನಾಗಿ ಕಾರ್ಯ ಮಾಡುವಂತೆ ಸಭೆಯು ಬೆಳೆಯುತ್ತಿರುವುದೋ? (1) ಹೊಸ ಸದಸ್ಯರು ಸಭೆಯ ಚಟುವಟಿಕೆಗಳಲ್ಲಿ ಒಳಗೊಳ್ಳುತ್ತಿರುವರೋ? (2) ಹೊಸ ನಾಯಕರು, ಬೋಧಕರು, ಸಹಾಯಕರು, ಮತ್ತು ಸಂಗೀತದ ನಾಯಕರು ಇತ್ತೀಚೆಗಿನ ವರ್ಷಗಳಲ್ಲಿ ತರಬೇತಿಗೊಳಿಸಲ್ಪಟ್ಟು ಸೇವೆ ಮಾಡಲು ನೇಮಿಸಲ್ಪಟ್ಟಿರುವರೋ? (3) ತಲಾಂತುಗಳ ಬೆಳವಣಿಗೆಗಾಗಿ ಸಭೆಯು ಒದಗಿಸಿರುವರೋ? (4) ಈಗಿನ ಸದಸ್ಯರಿಗೆ ಯಾವ ವರಗಳಿರುತ್ತವೆ?

(5) ಉಪಯೋಗಿಸಲ್ಪಡದ ವರಗಳು ಅವರಲ್ಲಿ ಇರುತ್ತವೆಯೋ? (6) ಪ್ರತಿಯೊಬ್ಬ ಸದಸ್ಯನು ಕರ್ತನ ಸೇವೆಯಲ್ಲಿ ತನ್ನ ವರಗಳನ್ನು ಉಪಯೋಗಿಸಲು ಅವಕಾಶ ಕೊಡಲ್ಪಟ್ಟಿರುವದೆಂದು ನಂಬಿರುವನೋ?

*ಒಂದು ಸಭೆಯ ಸಾಮರ್ಥ್ಯವನ್ನು ಪೃಥಕ್ಕರಿಸುವಲ್ಲಿ "ನಮ್ಮ ಸಾಧ್ಯತೆಗಳು ಯಾವವು?" ಎಂಬುದನ್ನು ಪ್ರಶ್ನಿಸಿರಿ.* ಸಭೆಯ ಸಾಮರ್ಥ್ಯವನ್ನು ನಿರ್ಣಯಿಸುವದರಲ್ಲಿ, ಸಭೆಯ ನಾಯಕರು ಕೆಲವು ಪ್ರಶ್ನೆಗಳನ್ನು ಕೇಳುವ ಅಗತ್ಯತೆಯಿದೆ:

*ಸೇವಕರ ಬಗ್ಗೆ ಕೇಳಿರಿ:* ಈಗ ಸದಸ್ಯತ್ವವು ಹೇಗಿದೆ? ಸ್ಥಳಿಕ ಸಭೆಯ ಸದಸ್ಯರ ವಯಸ್ಸು ಎಷ್ಟೆಷ್ಟು ಇದೆ. ಸಾಮಾಜಿಕ - ಆರ್ಥಿಕ ಸ್ಥಿತಿಯ, ವಿದ್ಯಾ ಹಿನ್ನೆಲೆಯ ಬಗ್ಗೆ, ಕುಲ ಇಲ್ಲವೇ ಜಾನಾಂಗಿಕ ಗುಂಪಿನ ಬಗ್ಗೆ, ಸದಸ್ಯರ ಉದ್ಯೋಗಗಳ ಬಗ್ಗೆ ಏನಾಗಿರುತ್ತದೆ? ಸಭೆಯಲ್ಲಿ ಯಾವ ತರದ ಕುಟುಂಬಗಳ ಗುಂಪುಗಳು ಇರುತ್ತವೆ ಮತ್ತು ಸಭೆಯ ಕುಟುಂಬಗಳು ಹೇಗೆ ಸಂಬಂಧಿಸಿರುತ್ತವೆ? ಪ್ರತಿಯೊಬ್ಬ ಸದಸ್ಯನ ಆಸಕ್ತಿಗಳು, ಸಾಮರ್ಥ್ಯಗಳು ಮತ್ತು ವರಗಳು ಯಾವವು? ಯಾವ ಪಾತ್ರವನ್ನು (ಉದಾಹರಣೆ ಟೀಚರ್, ಡೀಕನ್, ಹಿರಿಯ) ಸಭೆಯಲ್ಲಿ ಸದಸ್ಯನು ಈಗ ತುಂಬಿರುತ್ತಾನೆ? ಪ್ರತಿಯೊಬ್ಬನು ಹಿಂದೆ ಏನು ಮಾಡಿದನು?

*ದೂರದೃಷ್ಟಿಯ ಬಗ್ಗೆ ಕೇಳಿರಿ:* ಯಾವ ರೀತಿಯ ಸದಸ್ಯರಲ್ಲದವರು ಕ್ರಮ ಪ್ರಕಾರವಾಗಿ ಭಾಗವಹಿಸುತ್ತಾರೆ? ಬೈಬಲ್ ಕ್ಲಾಸುಗಳಿಗೆ ಆಗಾಗ ಬರುವ ಮಕ್ಕಳು ಯಾವ ಸದಸ್ಯರಲ್ಲದ ಮನೆಗಳಿಂದ ಬರುತ್ತಾರೆ?

*ಕಾರ್ಯಕ್ರಮಗಳ ಬಗ್ಗೆ ಕೇಳಿರಿ:* ದೇವರ ವಾಕ್ಯವನ್ನು ಸಾರುವ ಮತ್ತು ಪ್ರಾಣಗಳನ್ನು ರಕ್ಷಿಸುವ ಕಾರ್ಯಕ್ಕಾಗಿ ಇತ್ತೀಚೆಗೆ ಏನು ಮಾಡಲ್ಪಟ್ಟಿದೆ, ಈ ಕಾರ್ಯಕ್ರಮಗಳು ಹೇಗೆ ಪರಿಣಾಮಕಾರಿಯಾಗಿವೆ?

*ಜನ ಸಂಖ್ಯೆಯ ಬಗ್ಗೆ ಕೇಳಿರಿ:* ಸಭೆಯು ಅಸ್ತಿತ್ವದಲ್ಲಿರುವ ಸಮಾಜದ ಗುಣಲಕ್ಷಣಗಳು ಯಾವವು? ಯಾವ ಗುಂಪುಗಳು ಪ್ರತಿಕ್ರಿಯೆ ತೋರಿಸುವಲ್ಲಿ ಆಸಕ್ತಿಯುಳ್ಳವುಗಳಾಗಿವೆ? ಎಂಥಾ ವಿಶೇಷ ಅವಕಾಶಗಳನ್ನು ಸಮಾಜವು ಕೊಡುತ್ತದೆ?

ಸಭೆಯ ಇಂದಿನ ಪರಿಸ್ಥಿತಿಯನ್ನು ಮತ್ತು ಅದರ ಸಾಧ್ಯತೆಗಳನ್ನು ನಿರ್ಧರಿಸುವದರಿಂದ, ಸಭೆಯ ನಾಯಕರು ಯಾವ ಯೋಜನೆಗಳನ್ನು ಮಾಡಬೇಕು. ಯಾವ ರೀತಿಯ ಕಾರ್ಯಕ್ರಮಗಳು ಕೆಲಸ ಮಾಡುತ್ತವೆ ಮತ್ತು ಕರ್ತನು ಯಾವ ಅವಕಾಶದ ಬಾಗಿಲುಗಳನ್ನು ತೆರೆದಿದ್ದಾನೆ ಎಂಬುದನ್ನು ತಿಳಿಯುವ ಸ್ಥಿತಿಯಲ್ಲಿರುತ್ತಾರೆ.

## ಹೆಜ್ಜೆ 6: ಸಭೆಯ ಬೆಳವಣಿಗೆಗಾಗಿ ಯೋಜನೆಗಳನ್ನು ಮಾಡು

ಸಭೆಯ ನಾಯಕರು ಗುರಿಗಳ ಬಗ್ಗೆ ಯೋಚಿಸಿದ ನಂತರ ಮತ್ತು ಸ್ಥಳಿಕ ಸಭೆಯ ಹಿಂದಿನ ಹಾಗೂ ಇಂದಿನ ಸ್ಥಿತಿಯನ್ನು ಪರೀಕ್ಷಿಸಿದ ನಂತರ, ಅವರು ಸ್ಥಳಿಕ ಸಭೆಯ ಸಹಾಯದಿಂದ, ಭವಿಷ್ಯದ ಬೆಳವಣಿಗೆಗಾಗಿ ಯೋಜನೆಗಳನ್ನು ಮಾಡತಕ್ಕದ್ದು.[7]

### ಸಾಮಾನ್ಯ ವಿಧಾನಗಳು

ಬೆಳವಣಿಗೆಗಾಗಿ ಯೋಜನೆಗಳು ಎಲ್ಲಾ ಸಭೆಗಳಿಗೆ ಹುದುವಾಗಿರುವ ವಿಧಾನಗಳನ್ನು ಒಳಗೊಂಡಿರಬೇಕು. ಅವುಗಳಲ್ಲಿ ಕೆಳಗಿನವುಗಳು ಇರುತ್ತವೆ:

(1) *ಜಯಿಸುವ ಮನೋಭಾವನೆಯನ್ನು,* ಸಕಾರಾತ್ಮಕ ಭಾವನೆಯನ್ನು, ಬೆಳವಣಿಗೆ ಯೋಗ್ಯವಾದ ವಾತಾವರಣವನ್ನು ಬೆಳೆಯಿಸಿಕೊಳ್ಳುವುದು. ಸ್ಥಳಿಕ ಸಭೆಯ ಸಕಾರಾತ್ಮಕ ಸ್ವರೂಪವಿರುವವರೆಗೆ ಸದಸ್ಯರು "ಶುಭವಾರ್ತೆಯನ್ನು" ಪ್ರಸಾರಮಾಡುವದಿಲ್ಲ.

(2) *ಹೊರಗಿನವರಿಗೆ ಸ್ನೇಹಪರ, ಆಸಕ್ತಿಯುಳ್ಳ ತೆರೆಯಲ್ಪಟ್ಟ ಸಭೆಯಾಗುವುದು.* ಸಭೆಯನ್ನು "ಉಪಯೋಗಿಸುವ ಸ್ನೇಹತ್ವವನ್ನು" ಮಾಡಲು ನಾಯಕರು ಸಭೆಯನ್ನು -

ಅದರ ಸದಸ್ಯರನ್ನು ಸೌಕರ್ಯಗಳನ್ನು, ಕಾರ್ಯಕ್ರಮಗಳನ್ನು, ಮತ್ತು ಆರಾಧನೆಯನ್ನು ಸಂದರ್ಶಕರ ದೃಷ್ಟಿಯಿಂದ ನೋಡತಕ್ಕದ್ದು, ಮತ್ತು ಸಂದರ್ಶಕರನ್ನು ಆಕರ್ಷಿಸುವದಕ್ಕಾಗಿ (ಪರಿಶುದ್ಧ ಬರಹದ ಮೇರೆಗಳೊಳಗೆ) ಅವಶ್ಯಕವಾದ ಯಾವುದೇ ಬದಲಾವಣೆಗಳನ್ನು ಮಾಡಬಹುದು.

(3) *ಸುವಾರ್ತಾ ಸೇವೆಗೆ ಒತ್ತು ಕೊಡುವುದು* - ವಿಶೇಷವಾಗಿ ಪ್ರತಿಯೊಬ್ಬರೂ ಸುವಾರ್ತಾ ಸೇವೆಗೆ ಸಹಾಯ ಮಾಡುವ ಅಗತ್ಯತೆ ಇರುತ್ತದೆ. ತಪ್ಪಿ ಹೋದವರನ್ನು ಮಾರ್ಪಡಿಸುವದರಿಂದ ಸಭೆಯು ಬೆಳೆಯಬೇಕಾದರೆ, ಸುವಾರ್ತೆಯನ್ನು ಪ್ರಸಂಗಿಸುವದರ ಮಹತ್ವವನ್ನು ನಾಯತಕ್ಕವು ಒತ್ತಿ ಹೇಳಬೇಕು ಮತ್ತಾಯ 28:19, 20ರಲ್ಲಿ ಹೇಳಿರುವುದು. ದೊಡ್ಡ ಆಜ್ಞೆಯಾಗಿದೆ ಆದರೆ "ದೊಡ್ಡ ಸೂಚನೆಯಾಗಿರುವದಿಲ್ಲ" ಎಂಬುದನ್ನು ಸದಸ್ಯರು ಗ್ರಹಿಸಿಕೊಳ್ಳತಕ್ಕದ್ದು. ಆತ್ಮಗಳನ್ನು ಗೆಲ್ಲುವುದು, ಸ್ಥಳಿಕವಾಗಿ ಮತ್ತು ಪರದೇಶಗಳಲ್ಲಿ, ಸಭೆಗೆ ಆಯ್ಕೆಮಾಡಿಕೊಳ್ಳಬಹುದಾದ ಒಂದು ವಿಷಯವಾಗಿರದೆ, ಅದು ಕ್ರಿಸ್ತನ ದೇಹದ ವ್ಯವಹಾರ ವಾಗಿದೆ ಎಂಬುದನ್ನು ನಾವು ನಂಬುವ, ಬೋಧಿಸುವ ಮತ್ತು ಕಾರ್ಯಮಾಡುವ ಅಗತ್ಯತೆ ಇರುತ್ತದೆ!

(4) *ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು.*[8] ಪ್ರತಿಯೊಬ್ಬ ಸದಸ್ಯನು ತನ್ನ ವರಗಳನ್ನು ಉಪಯೋಗಿಸಿ, ಒಳಗೊಳ್ಳುವದಕ್ಕೆ ತನ್ನ ವೈಯಕ್ತಿಕ ಜವಾಬ್ದಾರಿಕೆಯನ್ನು ಸ್ವೀಕರಿಸಿಕೊಂಡರೆ ಸಭೆಯು ಬೆಳವಣಿಗೆ ಹೊಂದುವುದು.

(5) *ವಿವಿಧ ವಿಧಾನಗಳನ್ನು ಉಪಯೋಗಿಸಿರಿ.* ಒಂದೇ ಒಂದು ವಿಧಾನವನ್ನು ಉಪ ಯೋಗಿಸುವದಕ್ಕಿಂತ ಹೆಚ್ಚಾಗಿ ವಿವಿಧ ವಿಧಾನಗಳನ್ನು ಉಪಯೋಗಿಸುವದರಿಂದ ಸಭೆಗಳು ಹೆಚ್ಚು ಜನರನ್ನು ಗೆದ್ದುಕೊಳ್ಳುವರು ಎಂಬುದನ್ನು ಕೆಲವು ಸಂಶೋಧನೆಗಳು ತೋರಿ ಸುತ್ತವೆ.

(6) *ಗ್ರಹಿಸುವ ಗುಂಪುಗಳ ಕಡೆಗೆ ಗುರಿಯಿಡಿರಿ.* ಯಾವುದೇ ಸಮಾಜದಲ್ಲಿ ಕೆಲವು ಜನರು ಇತರರಿಗಿಂತ ಹೆಚ್ಚು ಗ್ರಹಿಸುವ ಶಕ್ತಿಯುಳ್ಳವರಾಗಿರುತ್ತಾರೆ. ಇವರನ್ನು ತಲುಪಲು ಪ್ರಯತ್ನಿಸುವುದು ಒಳ್ಳೆಯ ವಿಚಾರವಾಗಿದೆ (ಪ್ರತಿಯೊಬ್ಬರಿಗೂ ನಾವು ಮಾಡುವ ಸಾಮಾನ್ಯ ಮನವಿಗಿಂತಲೂ ಹೆಚ್ಚಾಗಿ ಅಗತ್ಯವಾಗಿ ತಳ್ಳಿ ಬಿಡದೇ).

(7) *ಬಿದ್ದು ಹೋದವರ ಸಮಸ್ಯೆಯನ್ನು ಪರಿಹರಿಸಲು ಪ್ರಯತ್ನಿಸಿರಿ.*[9] ಸದಸ್ಯರು ಬಿದ್ದು ಹೋಗುವ ಸಮಸ್ಯೆಯನ್ನು ಸಂಪೂರ್ಣವಾಗಿ ಪರಿಹರಿಸುವದನ್ನು ಯಾವ ಸಭೆಯೂ ಎಂದೂ ಮಾಡಿರುವದಿಲ್ಲ; ಆದರೆ ಯಾವುದೇ ಸಭೆಯು ತಾನು ತನ್ನ ಹೆಚ್ಚಾದ ಸದಸ್ಯರನ್ನು ನಂಬಿಗಸ್ತ ರಾಗಿ ಇಡಲು ಶಕ್ತವಾದದ್ದಾಗಿರದಿದ್ದರೆ ಸಂಖ್ಯೆಯಲ್ಲಿ ಬೆಳೆಯುವುದೋ.

(8) *ಆರಾಧನೆಗಳನ್ನು ಫಲಭರಿತವಾದವುಗಳನ್ನಾಗಿ ಮಾಡಿರಿ.* ಒಂದು ಸ್ಥಳಿಕ ಸಭೆಯು ಅದರ ಆರಾಧನೆಗಳು ಸದಸ್ಯರಿಗೆ ಮತ್ತು ಸದಸ್ಯರಲ್ಲದವರಿಗೆ ಸಹಾಯ ಮಾಡುವವುಗಳಾ ದರೆ ಅದು ಬೆಳೆಯ ಬಹುದಾಗಿದೆ. ಎಲ್ಲಕ್ಕಿಂತ ಹೆಚ್ಚು ಮಹತ್ವದ್ದು, ನಮ್ಮ ಆರಾಧನೆಯಿಂದ ದೇವರು ಸಂತುಷ್ಟಗೊಳಿಸಲ್ಪಡಬೇಕು. ಸದಸ್ಯರಲ್ಲದವರು ಪಡೆದುಕೊಳ್ಳುವ ಮೊದಲನೆಯ ಪ್ರಭಾವವು ಆರಾಧನೆಯಲ್ಲಿ ಅವರ ಅನುಭವದಿಂದ ಸಾಮಾನ್ಯವಾಗಿ ಬರುವದರಿಂದಾಗುತ್ತದೆ. ಮೊದಲನೆಯ ಪ್ರಭಾವಗಳು ಮಹತ್ವದವುಗಳಾಗಿವೆ, ನಮ್ಮ ಆರಾಧನೆಗಳು ಸಂದರ್ಶಕರಿಗೆ ಉಪಯುಕ್ತವಾದವುಗಳಾಗಿದ್ದರೆ, ಅವರು ನಮ್ಮ ಬೋಧನೆಯನ್ನು ಕೇಳಲು ಇನ್ನೂ ಹೆಚ್ಚು ಸಿದ್ಧರಾಗಿರುವರು.

(9) *ಜಾಹೀರಾತು ಕೊಡುವುದು.* ಜಾಹೀರಾತು ಕೊಡವುದು ಮಾತ್ರವೇ ಸಭೆಯ ಬೆಳವಣಿಗೆಯನ್ನು ತರುವದಿಲ್ಲ, ಆದರೆ ಅದು ಬೆಳವಣಿಗೆಯನ್ನು ತೆಗೆದು ಕೊಳ್ಳ ಬಹುದಾದ ವಾತಾವರಣವನ್ನು ಉತ್ಪಾದಿಸಬಹುದು.

**ಒಂದು ನಿರ್ದಿಷ್ಟವಾದ ಕೌಶಲ್ಯ**

ಬೆಳವಣಿಗಾಗಿ ಒಂದು ಸ್ಥಳಿಕ ಸಭೆಯ ಯೋಜನೆಯು ಆ ಸಭೆಗೆ ಹೊಂದುವಂತೆ ರೂಪಿಸಲ್ಪಡಬೇಕು. ಪ್ರತಿಯೊಂದು ಸಭೆಗೆ ಯಾಕೆ ನಿರ್ದಿಷ್ಟವಾದ ಕೌಶಲ್ಯವು ಅಗತ್ಯ ವಾಗಿದೆ? "ನಿರ್ದಿಷ್ಟ ನಿಯಮದ" ಕಾರಣದಿಂದ: ಸಭೆಯ ಬೆಳವಣಿಗೆಯ ಪ್ರತ್ಯೇಕ ವಾದ ಉದಾಹರಣೆಯ ಕಾರಣಗಳು ನಿರ್ದಿಷ್ಟವಾದವುಗಳಾಗಿದ್ದು, ಆ ಸಭೆಯಲ್ಲಿ ಕಂಡು ಬರುವ ಸಂಗತಿಗಳ ಮಿಶ್ರಣಕ್ಕೆ ಸಂಬಂಧಿಸಿವೆ, ಆದರೆ ಇನ್ನೊಂದರಲ್ಲಿ ದ್ವಿಪ್ರತಿಯಾಗುವ ಅವಶ್ಯಕತೆ ಇರುವದಿಲ್ಲ.

ಇದು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳಲ್ಪಟ್ಟಿರುವದಿಲ್ಲ. ನಮ್ಮ ಸಹೋದರತ್ವದಲ್ಲಿ ಪ್ರತಿಯೊಂದು ಸಭೆಯು ದೊಡ್ಡ ಬೆಳವಣಿಗೆಯ ಒಂದು ಉದಾಹರಣೆಯಂತೆ ಹೇಳಲ್ಪಟ್ಟಿದೆ. ಇತರ ಎಲ್ಲಾ ಸಭೆಗಳು "ಹೋಗು - ಹಾಗೆಯೇ ಮಾಡು" ಎಂಬ ಕಲ್ಪನೆಯಿಂದ - ಕೆಲವೊಂದು ರೀತಿಯ ಸಮಾಜದಲ್ಲಿ ಕಂಡು ಬರುತ್ತದೆ. ಮತ್ತು ಕೆಲವೊಂದು ರೀತಿಯ ಸದಸ್ಯತ್ವದಿಂದ ರಚಿಸಲ್ಪಟ್ಟಿರುತ್ತದೆ. ಈ ಗ್ರಹಿಕೆಯೊಂದಿಗೆ ಸಮಸ್ಯೆಯು ಸ್ಥಳಿಕ ಸಭೆಗಳು ಅವು ಸೇವೆ ಮಾಡುವ ಸಮಾಜಗಳಿಂದ ಭಿನ್ನವಾಗಿರುತ್ತವೆ (ಜನಸಂಖ್ಯೆಯ ದಟ್ಟಣೆಯಿಂದ, ಜನಾಂಗ ಇಲ್ಲವೇ ಕುಲದ ರಚನೆಯಿಂದ, ಸರಾಸರಿ ವಯಸ್ಸು, ಹೆಚ್ಚುತ್ತಿರುವ ಇಲ್ಲವೇ ಕುಗ್ಗುತ್ತಿರುವ ಜನಸಂಖ್ಯೆ, ಇತ್ಯಾದಿ). ಮತ್ತು ಅವುಗಳ ಸದಸ್ಯತ್ವವನ್ನು ಒಳಗೊಂಡಿರುತ್ತದೆ. (ಸರಾಸರಿ ವಯಸ್ಸು, ಸಾಮಾಜಿಕ ಆರ್ಥಿಕಸ್ಥಿತಿ, ಸಾಮರ್ಥ್ಯಗಳು ಇತ್ಯಾದಿ). ಉದಾಹರಣೆಯಾಗಿ ಒಂದು ಹೊಸ, ಐಶ್ವರ್ಯವಂತ, ಬೆಳೆಯುತ್ತಿರುವ ಒಂದು ದೊಡ್ಡ ಪಟ್ಟಣದ ಅಂಚಿನಲ್ಲಿ, ವೈದ್ಯರು, ಲಾಯರುಗಳು ಎಂಜಿನಿಯರರು ವಾಸಿಸುವಲ್ಲಿ - ಸಭೆಯ ಬೆಳವಣಿಗೆಯನ್ನು ಹುಟ್ಟಿಸುವಂಥದ್ದು, ಇನ್ನೊಂದು ಪ್ರಾಂತ್ಯದಲ್ಲಿ ಒಂದು ಚಿಕ್ಕ ಪಟ್ಟಣದಲ್ಲಿ ಯಾವ ಬದಲಾವಣೆಯಿಲ್ಲದೇ ಸ್ಥಳಾಂತರಿಸ ಬಹುದು, ಉಪಯೋಗಿಸಲ್ಪಡಬಹುದು ಎಂದು ತಿಳಿಯುವುದು ವಾಸ್ತವಿಕವಾದ ದ್ದಾಗುವದಿಲ್ಲ.

ಸಭೆಯ ನಾಯಕರು ಒಂದು ನಿರ್ದಿಷ್ಟವಾದ ವಿಧಾನಕ್ಕೆ ತಲುಪುವುದು ಹೇಗೆ? ಇಲ್ಲಿ ಐದು ಸೂಚನೆಗಳು ಇರುತ್ತವೆ:

ಮೊದಲನೆಯದು, ಯೋಜಿಸುವುದು "ಸಂಘಟಿತ" ಕಾರ್ಯಕ್ರಮಗಳ ಅವಶ್ಯಕತೆಯು ಳ್ಳದ್ದಾಗಿರುವದಿಲ್ಲ ಎಂಬುದನ್ನು ಜ್ಞಾಪಿಸಿಕೊಳ್ಳಬೇಕು. ಕೆಲಸವು ಕಡಿಮೆ ಸಂಘಟಿತವಾಗಿದ್ದರೆ ಹೆಚ್ಚು ಉತ್ತಮವಾಗಿರುತ್ತದೆ. "ಸಂಘಟಿತ ಕಾರ್ಯಕ್ರಮಗಳು" ಸಭೆಯ ಗುರಿಗಳು ಬೇರೆ ರೀತಿ ಯಿಂದ ನೆರವೇರದಿದ್ದರೆ ಪ್ರಾರಂಭಿಸಲ್ಪಡತಕ್ಕದ್ದು.

ಎರಡನೆಯದು, ಸಭೆಯ ಬಲಗಳನ್ನು ಒತ್ತಿ ಹೇಳಿರಿ. ಪ್ರತಿಯೊಂದು ಸಭೆಗೆ ಒಂದು ಇಲ್ಲವೇ ಹೆಚ್ಚು ಕ್ಷೇತ್ರಗಳಲ್ಲಿ ಬಲವಾದದ್ದಾಗಿರುತ್ತದೆ; ಅಲ್ಲಿ ಅದರ ಕಾರ್ಯಕ್ರಮಗಳು ಈ ಬಲಗಳ ಸುತ್ತ ಕಟ್ಟಲ್ಪಡಬೇಕು.

ಮೂರನೆಯದು, ತಪ್ಪಿ ಹೋದವರಿಗೆ ಸುವಾರ್ತೆಯನ್ನು ಪ್ರಸಂಗಿಸುವ, ಕೊರತೆಯಲ್ಲಿರುವವರಿಗೆ ಸಹಾಯ ಮಾಡುವ, ಸಭೆಯನ್ನು ಬಲಪಡಿಸುವ, ಮತ್ತು ಕರ್ತನನ್ನು ಆರಾಧಿಸುವ ಅತ್ಯುತ್ತಮವಾದ ವಿಧಾನಗಳನ್ನು ಹುಡುಕಿರಿ. ಒಂದು ಸಭೆಗಾಗಿ ಅತ್ಯುತ್ತಮ ವಿಧಾನಗಳು ಇನ್ನೊಂದು ಸಭೆಗೆ ಅತ್ಯುತ್ತಮ ವಿಧಾನಗಳಾಗಬೇಕಾಗಿರುವದಿಲ್ಲ. ಪ್ರತಿಯೊಂದು ಮಾದರಿಯನ್ನು ಅನುಸರಿಸುವದನ್ನು ತಪ್ಪಿಸಿಕೊಳ್ಳಿರಿ.

ನಾಲ್ಕನೆಯದು, ಎಲ್ಲಾವನ್ನೊಳಗೊಂಡಿರುವಂತೆ ಯೋಚಿಸಿರಿ. "ಸಂಘಟಿತ ಕಾರ್ಯಕ್ರಮಗಳು" ಅವಶ್ಯವಾಗಿದ್ದರೆ, ಆಗ ಅವುಗಳನ್ನು ಸರಿಯಾಗಿ ಮಾಡ ಬೇಕು. ಒಂದು ಕಾರ್ಯಕ್ರಮಕ್ಕೆ ಯಶಸ್ವಿಯಾದ ಯೋಜನೆಯು ಈ ಕೆಳಗಿನ ಮಾಹಿತಿಯನ್ನು ಒಳಗೊಂಡಿರುವುದು! (A) ಯಾರು ಏನನ್ನು ಮಾಡುವರು, (B) ವೇಳಾಪತ್ರಿಕೆ, (C) ನಿಧಿಕೂಡಿಸುವುದು, (D) ಜಾಹೀರಾತು ಮತ್ತು ಪ್ರಸಾರಪಡಿಸುವಿಕೆ, (E) ಕಾರ್ಯಕ್ರಮವು ಹೇಗೆ

ಮುಕ್ತಾಯಗೊಳ್ಳಬೇಕು, ಮತ್ತು (F) ಕೆಲಸವು ಅನಂತರ ಹೇಗೆ ಹಿಂಬಾಲಿಸಲ್ಪಡಬೇಕು.

ಐದನೆಯದು, ಸತತವಾಗಿ ಯೋಜಿಸಿರಿ. ಸತತವಾಗಿ, ನಾಯಕರು ಏನು ಮಾಡಲ್ಪಟ್ಟಿದೆ ಎಬುದನ್ನು ಮೌಲ್ಯಮಾಪನ ಮಾಡುವುದು ಮತ್ತು ಭವಿಷ್ಯತ್ತಿಗಾಗಿ ಹೊಸ ಯೋಜನೆಗಳನ್ನು ಮಾಡುವುದು. ಪ್ರತಿಯೊಂದು ಕಾರ್ಯಕ್ರಮವು ಅದು ಯಶಸ್ವಿಯಾಗಲೀ ಇಲ್ಲವೇ ಸೋತು ಹೋಗಲಿ, ಮುಂದಿನ ಕಾರ್ಯಕ್ರಮ ಸಿದ್ಧ ಮಾಡಲಿಕ್ಕೆ ಮಾಡುವದಕ್ಕೆ ಸಹಾಯ ಮಾಡುವ ಕಲಿಯುವ ಅನುಭವವಾಗಿರುವುದು. ಪ್ರತಿಯೊಂದು ವರ್ಷದ ಯೋಜನೆಗಳು ಮುಂದಿನ ವರ್ಷದ ವಿಧಾನಕ್ಕೆ ನೆಲೆಗಟ್ಟನ್ನು ಹಾಕುವುದು.

## ಹೆಜ್ಜೆ 7: ಯೋಜನೆಗಳನ್ನು ಚುರುಕುಗೊಳಿಸುವುದು

ಯೋಜನೆಗಳು ಅವು ನಾಯಕರ ಮನಸ್ಸುಗಳಲ್ಲಿ ಇಲ್ಲವೇ ಪೇಪರಿನಲ್ಲಿ ಬರೆಯಲ್ಪಟ್ಟಿರುವವರೆಗೆ ಕಾರ್ಯರೂಪಕ್ಕೆ ಬರಲಾರವು. ಕಾರ್ಯವು ಯೋಜಿಸಲ್ಪಡತಕ್ಕದ್ದು, ಆದರೆ ಯೋಜನೆಯು ಕಾರ್ಯರೂಪಕ್ಕೆ ತರಲ್ಪಡತಕ್ಕದ್ದು. ಏನು ಮಾಡಲ್ಪಡುವ ಅಗತ್ಯತೆ ಇರುವುದು?

ಮೊದಲನೆಯದು, ಕಾರ್ಯವು ಸಹಕಾರದಿಂದ, ಅದು ಪ್ರಾರಂಭಿಸುವದಕ್ಕಿಂತ ಹೆಚ್ಚು ಸಮಯ ಮುಂಚಿತವಾಗಿ ಯೋಜಿಸಲ್ಪಡತಕ್ಕದ್ದು. ಯೋಜಿಸುವವದರಲ್ಲಿ ಸಂಬಂಧಪಟ್ಟ ಪ್ರತಿಯೊಬ್ಬರು ಒಳಗೊಂಡಿರುವಂತೆ ನೋಡಿಕೊಳ್ಳತಕ್ಕದ್ದು. ಎರಡನೆಯದು, ಒಂದು ಸಂಘಟಿತ ಯೋಜನೆಯು ಪ್ರಾರಂಭಿಸಲ್ಪಟ್ಟರೆ, ಅದನ್ನು ಯಾರಿಗಾದರೂ ವಹಿಸಿಕೊಡಿರಿ ಮತ್ತು ಅವನಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಲು ಅಧಿಕಾರವೂ ಹಣಕಾಸೂ ಕೊಡಲ್ಪಡುವಂತೆ ನೋಡಿಕೊಳ್ಳಿರಿ. ಮೂರನೆಯದು, ಆ ಕಾರ್ಯಕ್ರಮದ ಬಗ್ಗೆ ಸಭೆಯವರಿಗೆ ಮಾಹಿತಿ ಕೊಡುತ್ತಾ ಇರ್ರಿ; ಒಳ್ಳೆಯ ಸಂಪರ್ಕಿಸುವಿಕೆಯು ಯಶಸ್ವೀ ಸಭೆಯ ಕೆಲಸಕ್ಕೆ ಒಂದು ಬೀಗದ ಕೈಯಾಗಿರುತ್ತದೆ. ನಾಲ್ಕನೆಯದು, ಸದಸ್ಯರು ಕಾರ್ಯದಲ್ಲಿ ಒಳಗೊಳ್ಳುವಂತೆ ಅವರ ಮನವೊಲಿಸುವಲ್ಲಿ, ಪ್ರೇರೇಪಿಸುವದರಲ್ಲಿ ಕೆಲ ಪ್ರಯತ್ನಮಾಡಿರಿ. ಐದನೆಯದು, ಪ್ರಚಾರವು ಅಗತ್ಯವಾಗಿದೆ, ಸದಸ್ಯರ ಮಧ್ಯದಲ್ಲಿ ಕಾರ್ಯಕ್ರಮಗಳನ್ನು ಪ್ರಚುರಪಡಿಸಿರಿ, ಸಭೆಯ ಹೊರಗಿನವರಿಗೆ ಪ್ರಕಟಿಸಿರಿ, ಜಾಹಿರಾತು ಕೊಡಿರಿ. ಆರನೆಯದು, ಪ್ರಾರಂಭದಿಂದ ಅಂತ್ಯದವರೆಗೆ ಕೆಲಸದ ಮೇಲ್ವಿಚಾರಣೆ ಮಾಡಿರಿ. ಒಳ್ಳೇ ಪ್ರಾರಂಭವು ಅತ್ಯವಶ್ಯವಾದದ್ದಾಗಿದೆ, ಆದರೆ ಅದಷ್ಟೇ ಸಾಲದು. ಯಾವುದೇ ಕಾರ್ಯಕ್ರಮವು ಮುಂದುವರಿದ ಗಮನದ ಅಗತ್ಯತೆಯುಳ್ಳದ್ದಾಗಿರುತ್ತದೆ. ಸತತವಾಗಿ ಪ್ರಚುರ ಪಡಿಸುವದನ್ನೊಳಗೊಂಡು ಸಹನೆಯು ಅತ್ಯವಶ್ಯವಾದದ್ದಾಗಿದೆ. ಕಾರ್ಯಕ್ರಮಕ್ಕಾಗಿ ಅಂತ್ಯವನ್ನು ಯೋಜಿಸುವುದೂ ಮಹತ್ವದ್ದಾಗಿರುತ್ತದೆ. ಪರಿಣಾಮಗಳನ್ನು ಆಚರಿಸಿರಿ, ಮತ್ತು ಸಾಧಿಸಲ್ಪಟ್ಟ ಒಳ್ಳೆಯದಕ್ಕಾಗಿ ದೇವರನ್ನು ಕೊಂಡಾಡಿರಿ. ಏಳನೆಯದು, ಯಾವುದೇ ಕಾರ್ಯಕ್ರಮವು ಪೂರ್ತಿಯಾದ ನಂತರ, ಅದರ ಮೌಲ್ಯಮಾಪನವು ಮಾಡತಕ್ಕದ್ದು: "ನಾವು ಅದನ್ನು ಹೇಗೆ ಚೆನ್ನಾಗಿ ಮಾಡಬಹುದಿತ್ತು? ನಾವು ಅದನ್ನು ಪುನಃ ಮಾಡಿದರೆ, ನಾವು ಹೇಗೆ ಸುಧಾರಿಸಬಹುದು?" ಕಾರ್ಯಕ್ರಮದಿಂದ ಅನುಭವ ಪಡೆದು ಕೊಂಡದ್ದರಿಂದ, ಮುಂದಿನ ಪ್ರಯತ್ನಕ್ಕಾಗಿ ಹೊಸ ಯೋಜನೆಗಳು ಮಾಡಲ್ಪಡಬಹುದು.

## ಮುಕ್ತಾಯ

ಒಂದು ಸಭೆಗೆ ಇಲ್ಲವೇ ಒಬ್ಬ ಸಭಾ ನಾಯಕನಿಗೆ ಸಂಖ್ಯೆಗಳು ಯಶಸ್ವಿಯ ಪ್ರಮಾಣಗಳಾಗಿರುವದಿಲ್ಲ. ಸಂಖ್ಯೆಗಳು ಯಾವಾಗಲೂ ಒಬ್ಬ ನಾಯಕನ ಯಶಸ್ಸಿನ ಅಳತೆಯಾಗಿದ್ದರೆ, ಆಗ ನೋಹನು ಮತ್ತು ಹಾಗೆಯೇ ಯೆರೆಮೀಯನು ಗಮನೀಯ ವಾಗಿ ಸೋತು ಹೋದವರಾಗಿದ್ದಾರೆ. ಯೇಸುವಿನ ಜೀವನದ ಅಂತ್ಯದಲ್ಲಿ, ಆತನು ಕ್ರೂಜೆಗೆ ಹಾಕಲ್ಪಡುತ್ತಿದ್ದಾಗ,

ಮತ್ತು ಎಲ್ಲಾ ಶಿಷ್ಯರು ಆತನನ್ನು ಮರೆತು ಬಿಟ್ಟಾಗ, - ಒಬ್ಬನು ಆತನನ್ನು ಹಿಡಿದು ಕೊಟ್ಟನು ಮತ್ತು ಇನ್ನೊಬ್ಬನು ಆತನನ್ನು ಅಲ್ಲಗಳೆದನು - ಆತನ ಸೇವೆಯನ್ನು ಇತರರು ಸೋಲಿನಂತೆ ನೋಡಲು ಸುಲಭವಾಗಿರುವುದು.

ಕೇವಲ ಒಂದೇ ಪ್ರಾಣವು ರಕ್ಷಿಸಲ್ಪಡುವದರಲ್ಲಿ ಮತ್ತು ಸಭೆಯು ಬೆಳೆಯುವದನ್ನು ನೋಡುವದರಲ್ಲಿ ಭಾಗವಹಿಸುವುದು ಎಷ್ಟು ಆನಂದಕರವಾದದ್ದಾಗುತ್ತದಲ್ಲವೇ! ನಿನ್ನ ನಂಬಿಗಸ್ತಿಕೆ ಮತ್ತು ಶ್ರಮೆಯ ಕಾರಣದಿಂದ ಸಭೆಯು ಬೆಳೆದಿರುವದನ್ನು ತಿಳಿಯುವದರ ಆಶ್ಚರ್ಯಚಕಿತತೆಯನ್ನು ಊಹಿಸು, ಅದರ ಪರಿಣಾಮವಾಗಿ, ಬೇರೆ ರೀತಿಯಿಂದ ಪರ ಲೋಕದಲ್ಲಿ ಇರಲಾರದವರು ಅನೇಕರು ಪರಲೋಕದಲ್ಲಿ ಇರುವುದನ್ನು ಕಲ್ಪಿಸಿಕೋ! ಆ ಕುತೂಹಲಭರಿತ ವಿಚಾರವು ಬುದ್ಧಿವಂತಿಕೆಯಿಂದ ಮತ್ತು ಚೆನ್ನಾಗಿ ಯೋಚಿಸಿ ಕೆಲಸ ಮಾಡಿದರೆ ನಮ್ಮ ದಾಗಬಹುದು - "ಗುರಿಯಿಲ್ಲದೇ" ಅಲ್ಲ (1 ಕೊರಿಂಥ 9:26), ಆದರೆ ಹೇಗೆ ಕಟ್ಟಬೇಕು ಎಂಬುದರ ಬಗ್ಗೆ ಜಾಗರೂಕರಾಗಿರುವ (1 ಕೊರಿಂಥ 3:10), "ಪ್ರವೀಣ ಬುದ್ಧಿ ವಂತ ಶಿಲ್ಪಿಯಂತೆ" (ಗಳಂತೆ) ಕಾರ್ಯಮಾಡ ಬೇಕು. ಇದರಿಂದ ಎಲ್ಲಾ ಸಂಗತಿಗಳು ಎಲ್ಲಾ ಜನರಿಗೆ ಆಗುವವು, ಅದರಿಂದ ನಾವು "ಕೆಲವರನ್ನು ರಕ್ಷಿಸುವೆವು" (1 ಕೊರಿಂಥ 9:22).

---

ಟಿಪ್ಪಣಿಗಳು

[1]Darrel G. Rickard, "The Lord's Church is Marching," in the bulletin of the Tenth and Rockford Church of Christ, Tulsa, Oklahoma (7 June 1964). [2]Flavil R. Yeakley, Jr., "Churches of Christ Growing Again," *The World Evangelist* 19 (August 1990): 1. [3]ಈ ಹೆಜ್ಜೆಗಳು ಪ್ರಾಥಮಿಕವಾಗಿ ಸಂಖ್ಯಾ ಬೆಳವಣಿಗೆಗೆ ಮಾತ್ರ ಸಂಬಂಧಿಸಿವೆ. ಇದೇ ಪದ್ಧತಿಯು ಆತ್ಮಿಕ ಪ್ರಗತಿಗಾಗಿ ಯೋಜಿಸಲು ಉಪಯೋಗಿಸಲ್ಪಡಬಹುದು. ಮಾಡಿದಂತೆ ಸಲಹೆಗಳು ಆತ್ಮಿಕ ಬೆಳವಣಿಗೆಯನ್ನು ಬಿಟ್ಟು ಹೋಗುವದಿಲ್ಲ. ಪ್ರಯಾಣದಲ್ಲಿ ಬೆಳವಣಿಗೆಯನ್ನು ಪಾಠದ ಉಳಿದ ಭಾಗವು ಒತ್ತಿ ಹೇಳಿದರೂ, ಗುಣಮಟ್ಟದ ಬೆಳವಣಿಗೆಗಳಿಂದ ಹೆಚ್ಚು ಮಹತ್ವದ್ದೆಂದು ನಾವು ಅನ್ವಯಿಸುವದಿಲ್ಲ. [4]C. Wayne Zunkel, *Growing the Small Church-A Guide for Church Leaders* (Elgin, Ill.: David C. Cook, 1982), 23. [5]ಈ ವಿಷಯದ ಬಗ್ಗೆ ಹೆಚ್ಚು ವಿವರಗಳಿಗೆ ("Goal-setting," *Truth for Today*)ನ್ನು ನೋಡಿ. [6]ಅತೀ ಹೆಚ್ಚು ಸಂಬಂಧಿಸಿದ ಸಂಖ್ಯೆಯನ್ನು ಉಪಯೋಗಿಸತಕ್ಕದ್ದು. ಅದು ವರ್ಷಾಂತ್ಯಕ್ಕೆ ಸಂಬಂಧಿಸಿದ ಸಂಖ್ಯೆಯಾಗಿರಬೇಕು. ಕ್ರಿಸ್ತನ ಹೆಚ್ಚಾದ ಸಭೆಗಳಿಗೆ, ಬಹುಶಃ ಭಾನುವಾರ ಪ್ರಾತಃಕ್ಕಾಲದ ಸಂಖ್ಯೆಯು ಸಭೆಯು ಬೆಳೆದಿದೆಯೋ ಇಲ್ಲವೋ ಎಂಬುದನ್ನು, ಹೀಗಿದ್ದರೆ ಹೆಚ್ಚಾಗಿದೆ ಎಂಬುದನ್ನು ನಿರ್ಧರಿಸಲು ಬಹಳವಾಗಿ ಅರ್ಥಗರ್ಭಿತವಾದದ್ದಾಗಿದೆ. ಯಾವುದೇ ಅಂಕಿ ಸಂಖ್ಯೆಯು ಆಯ್ಕೆಮಾಡಿಕೊಳ್ಳಲ್ಪಟ್ಟರೆ, ಅದು ಸ್ಥಿರವಾಗಿ ಉಪಯೋಗಿಸಲ್ಪಡಬೇಕು. [7]ಹೆಜ್ಜೆ 6, "ಸಭೆಯ ಬೆಳವಣಿಗೆಗಾಗಿ ಯೋಜನೆಗಳನ್ನು ಮಾಡು" ಮತ್ತು ಹೆಜ್ಜೆ 7, "ಯೋಜನೆಗಳನ್ನು ಚುರುಕುಗೊಳಿಸುವುದು" ಎಂಬವುಗಳನ್ನು ಕುರಿತು ಹೆಚ್ಚು ವರದಿಗಾಗಿ "ವ್ಯವಸ್ಥಾಪನೆ" ಪಾಠವನ್ನು ನೋಡಿ. [8]"ಒಳಗೊಳ್ಳುವಿಕೆಯನ್ನು ಪ್ರೋತ್ಸಾಹಿಸುವುದು" ಎಂಬ ಪಾಠವನ್ನು ನೋಡಿ. [9]"ಬಿದ್ದು ಹೋದವರ ಸಮಸ್ಯೆಯನ್ನು ಬಗೆಹರಿಸುವುದು" ಎಂಬ ಪಾಠವನ್ನು ನೋಡಿ.